
ರಂಗ ಬಿನ್ನಹ

# ನೋವಿಗೆ ಮುಲಾಮು ಆನಂದ ಭಾವಿನಿ

**ಸಿರಿ ವಾನಳ್ಳಿ ಅಭಿನಯದ 'ಆನಂದ ಭಾವಿನಿ' ಏಕವ್ಯಕ್ತಿ ಪ್ರದರ್ಶನ ಕನ್ನಡ ರಂಗಭೂಮಿಯ ಹೊಸಬೆಳಕಿನ ಕೊಯಿಲು.**

■ ಎಸ್.ಎನ್.





ಈಕೆ ಕಾನೂನು ವಿದ್ಯಾರ್ಥಿನಿ. ವ್ಯಕ್ತಿತ್ವವೋ ಪಾದರಸದಂಥದ್ದು. ರಂಗಭೂಮಿ ಅಭಿನಯ, ಸಂಗೀತ, ಭಾಷಣಕಲೆ, ಅಡುಗೆ – ಹೀಗೆ ಹಲವು ಕ್ಷೇತ್ರಗಳಲ್ಲಿ ನಿಷ್ಣಾತೆ. ಈ ಜಾಣೆಯ ಹೆಸರು ಸಿರಿ ವಾನಳ್ಳಿ.

ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಸಿರಿ ಅಂತಿಮ ವರ್ಷದ ವಿದ್ಯಾರ್ಥಿನಿ. ಚಿಕ್ಕಂದಿನಿಂದಲೂ ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಮುಂದಿದ್ದ ಹುಡುಗಿ, ಮಂಡ್ಯ ರಮೇಶ್ ಅವರ 'ನಟನಾ' ಸಂಸ್ಥೆಯಲ್ಲಿ ನಾಟಕಗಳಲ್ಲಿ ಬಣ್ಣ ಹಚ್ಚಲಾರಂಭಿಸಿದಳು. 'ಗಗನ ಗುಡಿ', 'ಬೇಟಿ ಬಚಾವೊ ಬೇಟಿ ಪಡಾವೊ' ಮುಂತಾದ ಸಾಕ್ಷ್ಯಚಿತ್ರಗಳಲ್ಲಿ ನಟಿಸಿ ಸೈ ಎನಿಸಿಕೊಂಡಳು. 'ಜೀರ್ಜಿಂಬೆ' ಸಿನಿಮಾದಲ್ಲಿ ಬಾಲನಟಿಯಾಗಿ ಮಿಂಚಿ, 2016ರಲ್ಲಿ ರಾಜ್ಯಪ್ರಶಸ್ತಿಗೂ ಭಾಜನಳು.

ಯಕ್ಷಗಾನ ಕಲಾವಿದೆಯೂ ಆಗಿರುವ ಸಿರಿ, ಸದಾ ಹೊಸತನದ ಬಗ್ಗೆಯೇ ತುಡಿಯುವ ಚುರುಕುಮತಿ.

## ನೋವಿಗೆ ಮುಲಾಮು

'ಆನಂದ ಭಾವಿನಿ' – ಇದೊಂದು ಏಕವ್ಯಕ್ತಿ ನಾಟಕ. ಅವಳು ಮಡಿಕೇರಿಯ ಮೂಲೆಯೊಂದರಲ್ಲಿ ಕಲಾಶಾಲೆ ಆರಂಭಿಸುತ್ತಾಳೆ. ಅದಕ್ಕೆ 'ನೀನು ಬಂದು ಕೈಜೋಡಿಸಬಹುದು, ಆದರೆ ಯಜಮಾನನಾಗಿ ಅಲ್ಲ. ನಾನು ನಡೆಯುವುದು ನಿನ್ನ ಜೊತೆಯೇ ವಿನಾ ನಿನ್ನ ಹಿಂದೆ ಅಲ್ಲ' ಎಂದು ಅವನನ್ನು ಆಹ್ವಾನಿಸುತ್ತಾಳೆ. ನಾಲ್ಕು ವರ್ಷದ ಬಳಿಕ ಬಂದು ತಲುಪಿದ ಅವನ ಪತ್ರಕ್ಕೆ ಅವಳು ಕೊಡುವ ಉತ್ತರದಲ್ಲಿ, ಇಡೀ ಮಾನವ ಕುಲದ ಗಂಡು ಹೆಣ್ಣಿನ ಸಂಬಂಧದ ಜಿಜ್ಞಾಸೆ ಇರುವಂತಿದೆ. ಲಿಂಗಭೇದವನ್ನು ಮೀರುವ ಸಾಂಗತ್ಯದ ಸುಳಿವು, ಹಡೆಯದೇ ತಾಯಿಯಾಗಬಲ್ಲ ಹೆಣ್ತನದ ಸಹಜತೆಯನ್ನು ನಾಟಕ ಸಾರುತ್ತದೆ. 'ಅವಳ ದನಿ' ಎಲ್ಲೆಲ್ಲೂ ಅಪರೂಪವಾಗಿರುವ ಸಮಕಾಲೀನ ಸಂದರ್ಭಕ್ಕೆ 'ಆನಂದ ಭಾವಿನಿ' ನೋವಿಗೆ ಹಚ್ಚುವ ಮುಲಾಮಿನಂತಿದೆ.

ಇತ್ತೀಚೆಗಷ್ಟೇ ಮೈಸೂರಿನಲ್ಲಿ 'ಆನಂದ ಭಾವಿನಿ' ಪ್ರದರ್ಶನ ಕಂಡಿದೆ. ಈ ಭಾವಿನಿಯ ಮೂಲ, ಪುರುಷೋತ್ತಮ ಶಿವರಾಮ ರೇಗೆಯವರ ಪ್ರಸಿದ್ಧ ಮರಾಠಿ ಕಾದಂಬರಿ 'ಸಾವಿತ್ರಿ'. ಇದನ್ನು ಕನ್ನಡೀಕರಿಸಿದವರು ಗಿರಿಜಾಶಾಸ್ತ್ರಿ ಹಾಗೂ ರಂಗರೂಪಕ್ಕೆ ಸಿದ್ಧಪಡಿಸಿದವರು ಸುಧಾ ಆಡುಕಳ.

'ಆನಂದ ಭಾವಿನಿ' ಎಂದರೆ ಆನಂದವನ್ನು ಅನುಭವಿಸುವವಳು ಹಾಗೂ ಪಸರಿಸುವವಳು ಎಂದರ್ಥ. ಎರಡನೇ ವಿಶ್ವಯುದ್ಧದ ಸಂದರ್ಭದಲ್ಲಿ ನಡೆಯುವ ಘಟನಾವಳಿಗಳು ನಾಟಕದ ವಸ್ತು. ಮಡಿಕೇರಿಯಲ್ಲಿ ಹುಟ್ಟಿ ಬೆಳೆಯುವ ಬಾಲೆ ತನ್ನನ್ನು ಓರಗೆಯವರು ಪ್ರೀತಿಯಿಂದ 'ಸಾವೂ' ಎಂದು ಕರೆಯುವಾಗ ಅನುಭವಿಸುತ್ತಿದ್ದ ಕಿರಿಕಿರಿಯನ್ನೂ, ನಂತರ ಅಪ್ಪ 'ಆನಂದ ಭಾವಿನಿ – ಆನಂದವನ್ನು ಹಂಚುವವಳು' ಎಂದಾಗ ಆದ ಖುಷಿಯನ್ನೂ ವಿವರಿಸುತ್ತಾಳೆ. ಸಾವೂ (ಸಾವಿತ್ರಿ) ಮಡಿಕೇರಿಯ ಸುತ್ತಮುತ್ತಲ ಬದುಕನ್ನು ಅಜ್ಜಿಯರ ನೆನಪಲ್ಲಿ ಚಿತ್ರಿಸುತ್ತಾಳೆ.

ಮರವೊಂದರ ಹುಟ್ಟು–ಬದುಕು–ಸಾವು ಹಾಗೂ ಅದರ ಬೀಜವೇ ಮತ್ತೆ ಮರವಾಗಿ ಚಿಗುರುವ ಕಲ್ಪನೆ ಜಾಗತಿಕ ಸತ್ಯವನ್ನು ಒಡಲಲ್ಲಿ ಇಟ್ಟುಕೊಂಡು ನಾಟಕೀಯವಾಗಿ ಹೇಳುವಂತಿದೆ. ಇಲ್ಲಿಯ ಅಜ್ಜಿಕತೆಗಳಲ್ಲಿ ಶೃಂಗಾರವಿದೆ, ರೌದ್ರವಿದೆ, ಭೀಭತ್ಸವೂ ಇದೆ. ಹಲವು ರಸಗಳ ಪಾಕವಾದ ಈ ಅಭಿವ್ಯಕ್ತಿ, ಏಕವ್ಯಕ್ತಿ ಪ್ರದರ್ಶನದ ಇತಿಮಿತಿಗಳಿಗೆ ಸವಾಲು ಒಡ್ಡುವಂತಹದ್ದು.

ನಾಟಕದಲ್ಲಿ ನಿರೂಪಕಿ ಸಾವಿತ್ರಿ, ಅಪ್ಪನ ಜೊತೆ ಹಡಗಿನಲ್ಲಿ ಜಪಾನಿಗೆ ತೆರಳಿದ ಮೇಲೆ ಅಲ್ಲಿ ಎರಡನೇ ಮಹಾಯುದ್ಧವನ್ನು ಕಣ್ಣಾರೆ ಕಾಣುತ್ತಾಳೆ. ಯುದ್ಧದಲ್ಲಿ ಅಪ್ಪ–ಅಮ್ಮನನ್ನು ಕಳೆದುಕೊಳ್ಳುವ ಅನಾಥ ಮಗುವಿಗೆ ಈ ಕನ್ಯಾಮಣಿ ತಾಯಿಯಾಗುತ್ತಾಳೆ. ಅಪ್ಪನ ಸ್ನೇಹಿತ ಎಜ್ವರ್ಥ್ ಆಶಯದಂತೆ ಮಡಿಕೇರಿಗೆ ವಾಪಸ್ಸಾಗಿ ಕಲಾಶಾಲೆಯ ಮೂಲಕ ಹೊಸ ಬದುಕನ್ನು ಆರಂಭಿಸುತ್ತಾಳೆ. ಇಲ್ಲಿ ಕಾಣುವವಳು ಅಳುಮುಂಜಿ ಸಾವಿತ್ರಿಯಲ್ಲ. ಬದುಕಲ್ಲಿ ಬಂದ ಕಷ್ಟವನ್ನು ಧೈರ್ಯದಿಂದ ಎದುರಿಸಿ ಆನಂದವನ್ನು ಹಂಚುವ ಎದೆಗಾರಿಕೆಯವಳು. 'ಮುಂದಿನದನ್ನು ಬಹಳ ದೂರ ನೋಡಬಾರದು, ಹಿಂದಿನದರಲ್ಲಿ ಮುಳುಗಬಾರದು' ಎಂಬುದು ಅವಳ ಬದುಕಿನ ತತ್ತ್ವ. ವರ್ತಮಾನದ ಉತ್ಕಟತೆಯಲ್ಲಿ ನಾವು ಬದುಕಬೇಕು. ನಮಗೆ ನವಿಲು ಬೇಕೆಂದರೆ ನಾವೇ ನವಿಲಾಗಿ ಬಿಡಬೇಕು. ಬೇರೆ ಬೇರೆ ರೂಪಗಳನ್ನು ಧಾರಣೆ ಮಾಡಿಕೊಂಡು ಅವರ ದೃಷ್ಟಿಯಲ್ಲಿ ಜಗತ್ತನ್ನು ನೋಡಬೇಕು ಎಂಬುದು ಅವಳ ಅಭೀಪ್ಸೆ.

ಒಂದು ರೀತಿಯಲ್ಲಿ 'ಆನಂದ ಭಾವಿನಿ'ಯಲ್ಲಿ ಇದೇ ಎಂದು ಹೇಳಬಹುದಾದ ಒಂದು ಸರಳ ಕಥೆಯಿಲ್ಲ. ಅದೊಂದು ಅಸಂಗತ ನಾಟಕದ ರೀತಿಯೇ ಕಾಣಿಸಿಕೊಳ್ಳುತ್ತದೆ. ಆದರೆ ಹೆಣ್ಣಿನ ಬದುಕಿನಲ್ಲಿ ಎದುರಾಗುವ ಅನೇಕ ಸಮಕಾಲೀನ ಸವಾಲುಗಳನ್ನು ಅದು ಚರ್ಚಿಸುತ್ತದೆ.

'ಆನಂದ ಭಾವಿನಿ' ಅನೇಕ ಕಾರಣಗಳಿಂದ ಕರ್ನಾಟಕದ ರಂಗಭೂಮಿಯಲ್ಲಿ ಗಮನಿಸಬೇಕಾದ ಪ್ರಸ್ತುತಿ. ನಮ್ಮ ಏಕವ್ಯಕ್ತಿ ಪ್ರದರ್ಶನಗಳ ಸಾಲಿಗೆ ಇದೊಂದು ಹೊಸ ಸೇರ್ಪಡೆ. ನಾಟಕೀಯತೆ ಹಾಗೂ ಹಾಸ್ಯವಿಲ್ಲದೆಯೂ ಒಂದೂವರೆ ಗಂಟೆ ಪ್ರೇಕ್ಷಕರನ್ನು ಹಿಡಿದಿಡುವ ಸವಾಲು ಇಲ್ಲಿದೆ. ನಿರೂಪಕಿ ಸಿರಿ ಗುನುಗುವ ಹಾಗೂ ತನ್ನಷ್ಟಕ್ಕೆ ಹಾಡಿಕೊಳ್ಳುವ ಹಾಡುಗಳು ಆಪ್ಯಾಯಮಾನವಾಗಿವೆ ಹಾಗೂ ನಟಿಯೇ ಹಾಡುವುದು, ಹಾಡಿಕೊಂಡು ನರ್ತಿಸುವುದು ನಾಟಕದ ಧನಾತ್ಮಕ ಅಂಶ.

'ನಮಗೆ ನವಿಲು ಬೇಕೆಂದರೆ ನಾವೇ ನವಿಲಾಗಿಬಿಡಬೇಕು' ಎನ್ನುವ ಸಾವಿತ್ರಿಯ ಜೀವನ ಪ್ರೀತಿ ನಾಟಕದ ಉದ್ದಕ್ಕೂ ಧ್ವನಿಸುತ್ತದೆ. ಎಲ್ಲೆಲ್ಲೂ ಅವಳ ಧ್ವನಿ ಕಾಣೆಯಾಗಿರುವ ಈ ಕಾಲದಲ್ಲಿ ಇದೊಂದು ಹೊಸಬೆಳಕು.

ಪ್ರತಿಕ್ರಿಯಿಸಿ: **feedback@sudha.co.in**